ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪ್ಟೆಲರ್ ಆಫಿಸಿಗೆ ತಲಪಬೇಕಾಗಿರುತ್ತೆ, ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರಿ ಯಿಲ್ಲ.

ತಾರೀಖು 26ನೇ ಆಗಸ್ಟ್ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟ್‌ಮಾಫಿಸ್ ಮನಿಆರ್ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಫ್ಸೀಲ್ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುಂಥಾ ಕೂರ್ಪಗಳಿಗೆ ಮೇಲೆ ಅಸ್ಪಷ್ಟವಾಗಿ ಬರಿಯುವದರಿಂದಲೂ ವಿಶೇಷ ಗಲಾಟೆಗೆ ಆಸ್ಪದವಾಗಿರುವದರಿಂದ ಸರ್ವರಿಗೂ ತಿಳಿಸುವದೇನಂದರೆ,—ಯಲ್ಲಾ ತಾಲ್ಲೂಕು ಖಜಾನೆಗಳಲ್ಲಿಯೂ, ಗೆಜೆಟ್ ಚಂದಾ ಮೊಬಲಗು ತೆಗದುಕೊಂಡು ರಸೀತಿ ಕೊಡುವ ಬಗ್ಯಾಗಿ ಆಪ್ಪಣೆ ಯಿರುವದ್ದರಿಂದ ಇನ್ನು ಮೇಲೆ ಮೈಸೂರ್ ಶೀಮೆ ಅಲ್ಲದ ಇತರ ಸ್ಥಳಗಳಿಂದ ಬರುವ ಮನಿಆರ್ಡರ್ ಹೊರ್ತಾಗಿ ಅನ್ಯಥಾ ಆ ಬಗ್ಯಾಗಿ ಈ ಆಫಿಸಿಗೆ ಕಳುಹಿಸಲ್ಪಡುವ ಯಾವ ಮನಿಆರ್ಡರುಗಲಿ ಈ ಆಫಿಸನಲ್ಲಿ ಅಂಗೀಕರಿಸಲ್ಪಡಲಾರದು ಮತ್ತು ಪೋಸ್ಟ್ ಕಾರ್ಡ್ ಮೂಲಕ ಅಥವಾ ನೋಟ್ ಪೇಪರಿಗಿಂತಲೂ ಕಮ್ಮಿಯಾದ ಕಾಗದ್ದಲ್ಲಿ ಬರಿಯಲ್ಪಡುವ ಯಾವ ಅಂಶಕ್ಕೂ ನಿಗೆ ಕೊಡಲ್ಪಡಲಾರದು.

ತಾರೀಖು 3ನೇ ನವಂಬರ್ 1896.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರ ಗೆಜೆಟ್ ಕಂಪ್ಟೆಲರವರ ಹೆಸರಿಗೆ ಎರಡು ಮನೀ ಆರ್ಡರುಗಳು ಬಂದಿರುತ್ತವೆ. ಸದರೀ ಮನೀ ಆರ್ಡರ್ ಕೂರ್ಪಗಳಲ್ಲಿ ಮನೀ ಆರ್ಡರ್ ಕಳುಹಿಸಿದವರ ಹೆಸರು ವಿಳಾಸ ಯಾವ ಬಗ್ಯೆ ಮನೀ ಆರ್ಡರ್ ಕಳುಹಿಸಿದ್ದು ಈ ವಗ್ಯೆರೆ ತಫ್ಸೀಲುಗಳು ಇಲ್ಲ. ಸದರೀ ಮನೀ ಆರ್ಡರುಗಳು ಕಳುಹಿಸಿದವರು ಅಪುಗಳನ್ನ ಯಾತಕ್ಕೊಸ್ಕರ ಕಳುಹಿಸಿರುತ್ತಾರೆಯೋ ಆ ತಫ್ಸೀಲು ವಿವರವಾಗಿ ಈ ತಾರೀಖು ಲಾಗಾಯತು ಬಂದು ತಿಂಗಳು ಒಳಗಾಗಿ ತಿಳುಹಿಸುವಲ್ಲದೆ ಅವುಗಳಿಗಾಗಿ ಪಡೆದಿರುವ ರಸೀತಿಯನ್ನು ಈ ಆಫಿಸಿನಲ್ಲಿ ಈ ತಾರೀಖು ಲಾಗಾಯತು ಬಂದು ತಿಂಗಳ ವಳಗಾಗಿ ಹಾಜರ್ಮಾಡದಿದ್ದರೆ ನಂತರ ಅಂಥವರ ಫಿರ್ಯಾದು ಅಂಗೀಕರಿಸಲಾರದು.

ಸಿ. ರಾಘವಾಚಾರ್ಲು,
ಮೈಸೂರ್ ಗೆಜೆಟ್ ಕಂಪ್ಟೆಲರ್.

ನೋಟೀಸ್.

ತಾರೀಖು 12—1—96.

ಕಡೂರು ತಾಲ್ಲೂಕು ಬ್ರಹ್ಮಸಮುದ್ರ ಗ್ರಾಮದ ಸರ್ವೇನಂಬರು 170—171—172ನೇ ಬಾಗಾಯತು ತೋಟಗಳು ಮತ್ತು ಖಾನೇಷುಮಾರೀ ನಂಬರು 11ನೇ ಹಂಚಿನಮನೆ ಇಪ್ಪುಗಳ ಮೇಲೆ ನನ್ನ ಮಗನಾದ ಶ್ರೀರಂಗಭಟ್ಟನ ಹಕ್ಕು ಯಿರುವದ್ದರಿಂದಲೂ ಈ ಸ್ವತ್ತುಗಳು ಪೂರ್ವಿಕರಿಂದ ಬಂದದ್ದಾದ್ದರಿಂದಲೂ, ಮತ್ತು ಪಿತರಾರ್ಜಿತವಾದ್ದರಿಂದಲೂ ಸಹ ನನ್ನ ಗಂಡದಿರಾದರಂಗಾ ಭಟ್ಟರವರು ಮತ್ತು ಸೂರ್ಯನಾರಾಯಣಭಟ್ಟರವರ ಮಕ್ಕಳು ಕೃಷ್ಣಪುರಾಣೀಕರವರೂ ಸಹ ಸಮಭಾಗವಾಗಿ ಅನುಭವಿಸುತ್ತಾರೆ. ಮೇಲ್ಕಂಡ ಸ್ವತ್ತುಗಳೆಲ್ಲಾ ನನ್ನ ಮಗ ಶ್ರೀರಂಗಭಟ್ಟನೇ ಪೂರಾ ಹಕ್ಕುದಾರನಾಗಿರುವದ್ದರಿಂದ ಈ ಸ್ವತ್ತುಗಳನ್ನು ಕೃಷ್ಣಪುರಾಣೀಕರವರು ಖರೀದಿ ಮಾಡುತ್ತಾರಾಗಿ ವರ್ತಮಾನ ಕೇಳುತ್ತೇನೆ. ಈ ಸ್ವತ್ತುಗಳನ್ನು ಯಾರು ಕ್ರಯಕ್ಕೆ ಪಡಿಯುತ್ತಾರೋ ಅವರು ಮುಂದೆ ಆಗತಕ್ಕ ಕೋರ್ಟ್ ಖರ್ಚು ವಗ್ಯೆರೇ ನಷ್ಟಕ್ಕೆ ಸಹ ಬಾಧ್ಯರಾಗಿರುತ್ತಾರೆ. ಈಗ ಶ್ರೀರಂಗಭಟ್ಟನು 10 ವರುಷ ವಯಸ್ಸುಳ್ಳವನಾಗಿದ್ದಾನೆ. ಆದ್ದರಿಂದ ಗಾರ್ಡಿಯ್ಯನಾಗಿ ಈ ಸಂಗತಿಯನ್ನೆಲ್ಲಾ ಪ್ರಕಟಪಡಿಸಿ ಇರುತ್ತೇನೆ.

ನಂಜಮ್ಮನ ಗರೇ ರುಜು.

Mysore Govt. Central Press, Bangalore.—1896.